582

152

ಮೈಸೂರ ಗೆಜಿಟ್.

ಸಂ. 42.] ಸರ್ಕಾರದಿಂದ ಪ್ರಸಿದ್ಧ ಆದ್ದು. [ನಂ. 49

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 12, ಸ॥ 1907.

II ನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಯಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜುಡಿಷಿಯಲ್ ಇಲಾಖೆ.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಸ॥ 1907—08ನೆ ಇಸವಿ ಕಂಪನಿ ಮಿ॥ ನಂಬರ್ 7.

ಕೋಲಾರ ಗೋಲ್ಡ್ ಫೀಲ್ಡ್ಸ್ ರಾಬರ್ಟ್‌ಸನ್‌ಪೇಟೆ ಟ್ರೈಡಿಂಗ್ ಕಂಪನಿ ವಿಷಯದಲ್ಲಿ—

ಅರ್ಜಿದಾರರು. ಎದುರು ಅರ್ಜಿದಾರರು.

ಅಡಿಯಾಣಿ. 1ನೆ ಆದಿನಾರಣ ಸೆಟ್ಟಿ ವಗೈರೆ 5.

ಇದರಿಂದ ಕಂಪನಿ ಷೇರ್‌ದಾರ್ ವಗೈರೆ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

ಕೋಲಾರ ಗೋಲ್ಡ್ ಫೀಲ್ಡ್ಸ್ ರಾಬರ್ಟಸನ್ ಪೇಟೆಲಿರುವ ಟ್ರೈಡಿಂಗ್ ಕಂಪನೀ ಲಿಮಿಟೆಡನ್ನು ವೈಂಡಪ್ ಮಾಡಬೇಕೆಂತ ಮೇಲ್ಕಂಡ ಅರ್ಜಿದಾರನು ಈ ಕೋರ್ಟಿಗೆ ಅರ್ಜಿ ಕೊಟ್ಟಿರುವದ್ದರಿಂದ ಆ ಪ್ರಕಾರ ವೈಂಡಪ್ ಬಗ್ಯೆ ಆರ್ಡರು ಕೊಡಕೂಡದೆಂಬ ಇರಾದೇವುಳ್ಳವರು ಸ॥ 1908ನೆ ಇಸವಿ ಜನವರಿ 17ನೆ ತಾರೀಖು ಶುಕ್ರವಾರ ಪ್ರಾತಃಕಾಲ 11 ಘಂಟೆಗೆ ಈ ಕೋರ್ಟು ರೂಬರೂಬ್ ಖುದ್ದಾಗಿಯಾಗಲಿ ಅಥವಾ ಕ್ರಮವಾದ ಅಧಿಕಾರವನ್ನು ಹೊಂದಿದ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ಆಕ್ಷೇಪಣೆಯನ್ನು ತಿಳಿಸತಕ್ಕದ್ದಿದೆ. ಇದಕ್ಕೆ ತಪ್ಪಿದರೇ ಡಿಟೋ ಅಪ್ಲಿಕೇಷ್ಟ ಏಕಪಕ್ಷ ವಿಚಾರಣೆಯಿಂದ ಫೈನಲ್ ಮಾಡಲ್ಪಡುತ್ತೆ.

ಸ॥ 1907ನೆ ಇಸವಿ ಡಿಸೆಂಬರು 7ನೆ ತಾರೀಖು ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.